Sri A. G. RAMACHANDRA RAO.—That does not arise.

Alleged offences of fire by some persons of Mattedoddi Village, Ramanagaram Taluk.

Q.—284. Sri N. C. NAGAIAH REDDY (Goribidnur).—

Will the Government be pleased to state :—

(*a*) whether some persons of Mattedodi Village, Ramanagaram Taluk, had been committed to the Sessions for trial for the alleged offence of fire misehief ;

(*b*) what is the date on which the judgment was pronounced in this case ;

(*c*) who was the judge that delivered the judgment ;

(*d*) whether a notice was issued to Sri S. Govinda Sharma, Assistant Sessions Judge, Bangalore, to show cause why he should not be retired in view of the discrepancy in his age ;

(*e*) the date on which the said notice was issued by the Government ?

A.—Sri A. G. RAMACHANDRA RAO (Minister for Law and Education).—

(*a*) Yes.

(*b*) 29th May 1953.

(*c*) Sri S. Govinda Sharma, Additional Assistant Sessions Judge, Bangalore

(*d*) No notice has been issued by Government to Sri S. Govinda Sharma.

(*e*) Does not arise in view of the reply to part (*d*).

ಶ್ರೀ ಎಚ್. ಸಿ. ನಾಗಯ್ಯ ರೆಡ್ಡಿ.—ಇದೇ ಪ್ರಶ್ನೆಯನ್ನು ಇಲ್ಲಿ ಹಿಂದೆ ಕೇಳಿದಾಗ ಸಾಂಪ್ರದಾಯಿಕ ರೀತಿಯಲ್ಲಿ ನೋಟಿಸ್ ಕೊಟ್ಟಿತ್ತು ಎಂದು ಉತ್ತರಕೊಡಲಾಗಿತ್ತು, ಈ ಹೊತ್ತು 'No notice has been given' ಎಂದು ಹೇಳಿದ್ದೀರಿ, ಇದರಲ್ಲಿ ಯಾವುದು ನಿಜ!

ಶ್ರೀ ಎ. ಜಿ. ರಾಮಚಂದ್ರರಾವ್.—ನೇರವಾಗಿ ಶ್ರೀ ಶರ್ಮ ಎಂಬುವರಿಗೆ ಸರ್ಕಾರದವರು ನೋಟೀಸ್ ಕೊಟ್ಟಿದ್ದಾರೆಯೆ ಎಂದು ಕೇಳಿರುವುದಕ್ಕೆ 'ಇಲ್ಲ' ಎಂದು ಉತ್ತರ ಹೇಳಿದೆ. ಆ ಹೊತ್ತಿನ ಉತ್ತರಕ್ಕೂ ಈ ಹೊತ್ತಿನ ಉತ್ತರಕ್ಕೂ contradiction ಇಲ್ಲ.

ಶ್ರೀ ಎಚ್. ಸಿ. ನಾಗಯ್ಯರೆಡ್ಡಿ.—ಸಾಂಪ್ರದಾಯಿಕವಾಗಿ ಕಳುಹಿಸಿದೆ ಎಂದರೆ usual course ನಲ್ಲಿ ಕಳುಹಿಸಿದೆ ಎಂದು ಅರ್ಥ; contradication ಇಲ್ಲವೆ ?

ಶ್ರೀ ಎ. ಜಿ. ರಾಮಚಂದ್ರರಾವ್.—ಇಲ್ಲ, usual course ಎಂದರೆ, ಜುಡಿಷಿಯಲ್ ಇಲಾಖೆಯೊಡನೆ ಕಾಗದ ಪತ್ರ ನಡೆಸುವಾಗ ಹೈಕೋರ್ಟಿನ ಮೂಲಕ ನಡೆಸುವುದು.

ಶ್ರೀ ಎಚ್. ಸಿ. ನಾಗಯ್ಯರೆಡ್ಡಿ.—ಹೈಕೋರ್ಟಿನ ಮೂಲಕವೇ ಕಳುಹಿಸಿದ್ದೀರಾ ?

ಶ್ರೀ ಎ. ಜಿ. ರಾಮಚಂದ್ರರಾವ್.—ನೋಟೀಸ್ ಕೊಟ್ಟಿಲ್ಲ.

ಶ್ರೀ ಎಚ್. ಸಿ. ನಾಗಯ್ಯರೆಡ್ಡಿ.—ಇನ್ನೇನು ಚೀಟಿಯನ್ನು ಕಳುಹಿಸಿದ್ದಿರಾ? ಹೈಕೋರ್ಟಿಗೆ ಕಾಗದ ಕಳುಹಿಸಿಲ್ಲವೆ ? 29ನೆಯ ತಾರೀಖು 'Top priority' ಹಾಕಿ ಹೈಕೋರ್ಟಿನ ಮೂಲಕ ನೋಟೀಸ್ ಕಳುಹಿಸಿದ್ದೀವೆ ಎಂದು ಉತ್ತರ ಹೇಳಲಲ್ಲವೆ ?

ಶ್ರೀ ಎ. ಜಿ. ರಾಮಚಂದ್ರರಾವ್.—ಹೈಕೋರ್ಟ್ ನವರು ಇದನ್ನು ವಿಚಾರಣೆ ಮಾಡಿ ಬರೆಯಬೇಕೆಂದು ಅವರಿಗೆ ಬರೆದಿದೆ.

Holding November examinations in the Engineering College.

Q.—309 Sri V. R. NAIDU (Melleswaram).—

Will the Government be pleased to state :—

(*a*) whether they will arrange to hold examinations in November each year in the Engineering College as in the case of Medical College and the Medical School ;

(*b*) whether any proposal in that behalf has been received from the University ;

(*c*) whether they will take steps to hold the examinations during November 1953 ?

A.—Sri A. G. RAMACHANDRA RAO (Minister for Law and Education).—

(*a*) No.

(*b*) No.

(*c*) No.

ಶ್ರೀ ವಿ. ಆರ್. ನಾಯ್ಡು.—ಮೆಡಿಕಲ್ ಕಾಲೇಜು ಮತ್ತು ಮೆಡಿಕಲ್ ಸ್ಕೂಲುಗಳಲ್ಲಿ ನಡೆಸುವಂತೆ ಇಂಜಿನಿಯರಿಂಗ್ ಕಾಲೇಜಿನಲ್ಲಿ ನವೆಂಬರ್ ಪರೀಕ್ಷೆ ನಡೆಸುವುದಿಲ್ಲವೆಂದು ಹೇಳಲಾಗಿದೆ, ಏಕೆ ಆ ರೀತಿಮಾಡಿಲ್ಲ ?

ಶ್ರೀ ಎ. ಜಿ. ರಾಮಚಂದ್ರರಾವ್.—ಸಾಧ್ಯವಾಗದೇಯಿರುವುದರಿಂದ ಮಾಡಿಲ್ಲ.

ಶ್ರೀ ವಿ. ಆರ್. ನಾಯ್ಡು.—ದಾವಣಗೆರೆ ಇಂಜಿನಿಯರಿಂಗ್ ಕಾಲೇಜಿನಲ್ಲಿ ಈ ಪದ್ಧತಿಯನ್ನನುಸರಿಸುತ್ತಾರಲ್ಲವೆ ?

ಶ್ರೀ ಎ. ಜಿ. ರಾಮಚಂದ್ರರಾವ್.—ಅಲ್ಲಿ ಜೂಲೈ ತಿಂಗಳಲ್ಲಿ ಅಡ್ಮಿಷನ್ಸ್ ಇಲ್ಲ. ಆ ಕಾಲೇಜು ಪ್ರಾರಂಭವಾದದ್ದೇ ಸೆಪ್ಟೆಂಬರಿನಲ್ಲಿದ ಅದರಿಂದ ಹಾಗೆ ಮಾಡುತ್ತಾರೆ.

ಶ್ರೀ ವಿ. ಆರ್. ನಾಯ್ಡು.—ಹಾಗೆ ಮಾಡಿದರೆ ಒಳ್ಳೆಯದು, ಆ ರೀತಿ ಮಾಡಬೇಕೆಂದು ಹೊಸವಿ ಬಂದಿಲ್ಲವೆ ?

ಶ್ರೀ ಎ. ಜಿ. ರಾಮಚಂದ್ರರಾವ್.—ಆ ರೀತಿ ಮಾಡಿದರೆ ಒಳ್ಳೆಯದೆಂದಲ್ಲ, ಅವಶ್ಯಕವೆಂದು ಸೂಚಿಸಿದ್ದಾರೆ.

ಶ್ರೀ ವಿ. ಆರ್. ನಾಯ್ಡು.—ಆ ರೀತಿ ಮನವಿ ಸಂಬಂಧಪಟ್ಟ ಕಾಲೇಜುಗಳಿಂದಲಾಗಲಿ ಯೂನಿವರ್ಸಿಟಿ ಕೌನ್ಸಿಲ್‌ನಿಂದಾಗಲಿ ಬಂದಿಲ್ಲವೆ, ಕಾಗದ ಪತ್ರಗಳ ಮೂಲಕ?

ಅಧ್ಯಕ್ಷರು.—ಇಲ್ಲವೆಂದು ಹೇಳಿದ್ದಾರೆ.

ಶ್ರೀ ವಿ. ಆರ್. ನಾಯ್ಡು.—ಅಧ್ಯಕ್ಷರಲ್ಲಿ ಒಂದು ಮನವಿ. ಕೆಲವರಿಗೆ ಎರಡೇ ಪ್ರಶ್ನೆಗಳಿಗೆ ಅವಕಾಶ ಸಿಕ್ಕುತ್ತದೆ, ಇನ್ನು ಕೆಲವರಿಗೆ ಹೆಚ್ಚು ಪ್ರಶ್ನೆಗಳನ್ನು ಹಾಕಲು ಅವಕಾಶ ಸಿಕ್ಕುತ್ತದೆ; ಇದರಲ್ಲಿ ಮೆರಿಟ್ ಮೇಲೇನಾದರೂ ಹೀಗೆ ಕೊಡಲಾಗುತ್ತದೆಯೆ?

ಅಧ್ಯಕ್ಷರು.—ತಮ್ಮ ಪ್ರಶ್ನೆಗೆ ಇಲ್ಲವೆಂದು ಸ್ಪಷ್ಟವಾಗಿ ಉತ್ತರ ಕೊಟ್ಟಿದ್ದಾರೆ.

Annual income of Village Panchayets in Chikmagalur District.

Q.—65. Sri T. C. BASAPPA (Tarikere).—

Will the Government be pleased to state :—

(*a*) the number of village panchayets in each taluk of Chikmagalur District under the following categories :—

Panchayets with annual income of—

1. Rs. 100 and below.
2. Rs. 500 and below up to Rs. 100.
3. Rs. 1,000 and below up to Rs. 500
4. Above Rs. 1,000.

(*b*) how many village panchayets' accounts have been audited since 1947 and by whom (information to be furnished talukwar and under each category mentioned above);

(*c*) whether reports have been sent by the Amildars every year in this behalf to the Deputy Commissioner and from the Deputy Commissioner to the Government;

(*d*) whether they have incorported the same in the Administration Reports of the Government since 1947 ?

A.—Sri T. CHANNIAH (Minister for Public Health and Local Self-Government).—

(*a*)—

Name of the Taluk	Rs. 100 & below	Above Rs. 100 and below Rs. 500	Above Rs. 500 and below Rs. 1,000	Above Rs. 1,000	Total
1. Chikmagalur ...	84	44	2	1	131
2. Mudigere ...	55	19	3	1	78
3. Kadur ...	105	73	13	4	195
4. Tarikere ...	82	53	7	3	145
5. Narasimharajapura ...	20	9	...	...	29
6. Koppa ...	3	23	16	12	54
7. Sringeri ...	6	4	...	...	10
Total ...	355	225	41	21	624